319 ಶ್ರೀ ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)
ಮಾನ್ಯ ಕಂದಾಯಸಚಿವರು

ಅ) ಗುಲ್ಬರ್ಗಾ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ದಿಗ್ಗಾಂವ ಗ್ರಾಮದ ರೈತರ ಭೂಮಿ ಖರೀದಿಸಲು ಮೆ: ಗ್ರಾಸಿಂ ಕಂಪನಿಯ ವತಿಯಿಂದ ಭೂ ಸುಧಾರಣೆ ಕಾಯ್ದೆ ಕಲಂ 109ರ ಅಡಿಯಲ್ಲಿ ಪ್ರಸ್ತಾವನೆ ಸಲ್ಲಿಸಿರುವುದು ಸರಕಾರದ ಮುಂದೆ ಎಷ್ಟು ದಿವಸಗಳಿಂದ ಇತ್ಯರ್ಥವಾಗದೆ ಬಾಕಿ ಉಳಿದೆದೆ?

ಗುಲ್ಬರ್ಗ ಜಿಲ್ಲಾಧಿಕಾರಿಯವರಿಂದ ದಿನಾಂಕ 28.03.2008ರಂದು ಅಪೂರ್ಣ ಮಾಹಿತಿಗಳೊಂದಿಗೆ ಸರ್ಕಾರದಲ್ಲಿ ಪ್ರಸ್ತವನೆಯನ್ನು ಸ್ವೀಕರಿಸಲಾಗಿದೆ. ಈ ಸಂಬಂಧದ ಪತ್ರ ವ್ಯವಹಾರಗಳನ್ನು ನಡೆಸಲಾಗುತ್ತಿದೆ. ಸದರಿ ಮಾಹಿತಿಗಳನ್ನು ಪಡೆದು ಇತ್ಯರ್ಥಪಡಿಸಲಾಗುವುದು.

ಆ) ಇತ್ಯರ್ಥವಾಗದೇ ಉಳಿದಿರುವುದಕ್ಕೆ ಕಾರಣವೇನು? ಯಾವಾಗ ಇತ್ಯರ್ಥಗೊಳಿಸಲಾಗುವುದು.

ಸರ್ಕಾರದ ಪರಿಶೀಲನೆಯಲ್ಲಿದೆ.

<u>ಕರ್ನಾಟಕ ವಿಧಾನ ಸಭೆ</u>

178 ಶ್ರೀ ಈಶ್ವರ ಭೀಮಣ್ಣ ಖಂಡ್ರೆ
ಶ್ರೀ ಗೋವಿಂದ ಎಂ.ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು)

ಅ) ಬೀದರ ಜಿಲ್ಲೆಯಲ್ಲಿರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ಹಾಗೂ ಈ ಕೆರೆಗಳಿಂದ ಎಷ್ಟು ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯ ಹಾಗೂ ಕುಡಿಯುವ ನೀರಿನ ಸೌಲಭ್ಯ ದೊರಕುತ್ತಿದೆ; (ಗ್ರಾಮವಾರು ವಿವರಗಳನ್ನು ನೀಡುವುದು);

ಬೀದರ್ ಜಿಲ್ಲೆಯಲ್ಲಿ ಒಟ್ಟು 106 ಸಣ್ಣ ನೀರಾವರಿ ಕೆರೆಗಳಿವೆ ಹಾಗೂ ಈ ಕೆರೆಗಳಿಂದ ಒಟ್ಟು 19959 ಹೆಕ್ಟರ್ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರಕುತ್ತಿದೆ. ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಿಸಲಾಗುತ್ತಿರುವ ಕೆರೆಗಳಿಂದ ನೀರಾವರಿ ಸೌಲಭ್ಯ ಮಾತ್ರ ಒದಗಿಸಲಾಗುತ್ತಿದ್ದು, ಕುಡಿಯುವ ನೀರಿನ ಸೌಲಭ್ಯ ಒದಗಿಸುತ್ತಿಲ್ಲ. ಗ್ರಾಮವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಹೊಸ ಕೆರೆಗಳ ನಿರ್ಮಾಣಕ್ಕಾಗಿ ಸರ್ವೇ ಮಾಡಲಾಗಿದೆ; (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದ);

ಇ) ಈ ಕೆರೆಗಳ ನಿರ್ಮಾಣಕ್ಕಾಗಿ ತಗಲುವ ಅಂದಾಜು ವೆಚ್ಚ ಎಷ್ಟು;

ಈಗಾಗಲೇ ಸರ್ವೆ ಕಾರ್ಯ ಕೈಗೊಂಡು ಮಂಜೂರಾತಿ ನೀಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ–2(ಅ)ರಲ್ಲಿ ಹಾಗೂ ಹೊಸದಾಗಿ ಸರ್ವೆ ಕಾರ್ಯ ಕೈಗೊಂಡ ವಿವರಗಳನ್ನು ಅನುಬಂಧ–2(ಆ)ರಲ್ಲಿ ನೀಡಲಾಗಿದೆ.